# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಬಿ.ಟಿ.ಎಂ ಲೇಔಟ್ ಉಪ–ವಿಭಾಗದ ವಾರ್ಡ್ ಸಂಖ್ಯೆ–152 ಎಸ್.ಜಿ.ಪಾಳ್ಯ ಕಛೇರಿಯಲ್ಲಿ ದಿನಾಂಕ: 07.04.2022 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡುವಳಿಗಳು

* * * * * *

ದಿನಾಂಕ–07–04–2022 ರಂದು ನಡೆಸಲಾದ ವಾರ್ಡ್ ಮಟ್ಟದ ಸಾರ್ವಜನಿಕರ ಕುಂದು ಕೊರತೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸುವ ಸಂಬಂಧ ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಲಾಗಿ ಮೊದಲಿಗೆ ಹಾಜರಿದ್ದ, ಅದ್ಯಕ್ಷರಿಗೆ ಸ್ವಾಗತವನ್ನು ಕೋರುತ್ತಾ ಹಾಗೂ ಸಭೆಗೆ ಹಾಜರಾದ ಎಲ್ಲಾ ಇಲ್ಲಾಖೆಯ ಅಧಿಕಾರಿ ವರ್ಗದವರಿಗೆ ಮತ್ತು ಸ್ಥಳೀಯ ನಾಗರೀಕರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

ಸಭೆಯನ್ನು ಪ್ರಾರಂಭಿಸುತ್ತಾ, ಸದರಿ ವಾರ್ಡ್‌ನ ಎಲ್ಲಾ ಕುಂದುಕೊರತೆಗಳನ್ನು ಇಲಾಖೆವಾರು ಚರ್ಚಿಸಿ ಬಗೆಹರಿಸಿಕೊಳ್ಳಲು ಅಧ್ಯಕ್ಷರು ಸಲಹೆಯನ್ನು ನೀಡಿರುತ್ತಾರೆ. ಈ ಕುರಿತಂತೆ ಈ ಕೆಳಕಂಡ ವಿಷಯಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಿ ಪರಿಹರಿಸುವ ಬಗ್ಗೆ ಕೈಗೊಳ್ಳುವ ಕ್ರಮಗಳ ಬಗ್ಗೆ ಅಧಿಕಾರಿಗಳಿಗೆ ನಿರ್ದೇಶನವನ್ನು ನೀಡಲಾಯಿತು.

ಸಭೆಗೆ ಹಾಜರಿದ್ದ ಅಧಿಕಾರಿ ವರ್ಗ/ ಸದಸ್ಯರು

| ಕ್ರಮ .ಸಂ | ಹೆಸರು | ಮೊಬೈಲ್ ಸಂಖ್ಯೆ |
|---|---|---|
| ೦೧ | ಶ್ರೀ.ಎಸ್.ಪ್ರಭಾಕರ್, ಪ್ರಧಾನ ಅಭಿಯಂತರರು ಬಿ.ಬಿ.ಎಂ.ಪಿ. | 9480685379 |
| ೦೨ | ಶ್ರೀ.ಸತೀಶ್.ಡಿ ಸ.ಇಂ–152 ವಾರ್ಡ್ | 9480688152 |
| ೦೩ | ಶ್ರೀ.ಅಜಯ್‌ಕುಮಾರ್ ಕಿರಿಯ ಆರೋಗ್ಯ ಪರಿವೀಕ್ಷಕರು | 9632222304 |
| ೦೪ | ಶ್ರೀ. ಮಲ್ಲಿಕಾರ್ಜುನ್ ಬಿರಾದರ ಹಿರಿಯ ಆರೋಗ್ಯ ಪರಿವೀಕ್ಷಕರು | 9945042307 |
| ೦೫ | ಶ್ರೀ.ಸುರೇಶ್ ಎ.ಎಸ್.ಐ ಎಸ್.ಜಿ.ಪೋಲಿಸ್ ಠಾಣೆ | 8123010522 |
| ೦೬ | ಶ್ರೀ.ಹೋಲಿಯಪ್ಪ ಮಾರ್ಷಲ್ | 8904349926 |
| ೦೭ | ಶ್ರೀ.ಡಾ॥ ಮೊಹಮ್ಮದ್ ಕಮ್ರಾನ್ ಮೆಡಿಕಲ್ ಆಫಿಸರ್ | 9620206422 |
| ೦೮ | ಶ್ರೀ.ಕೃಷ್ಣ.ಸಿ ಕೆಲಸ ಪರಿವೀಕ್ಷಕರು ಬಿ.ಡ.ಬ್ಲೂ.ಎಸ್.ಎಸ್.ಬಿ | 9845768405 |
| ೦೯ | ಶ್ರೀ ಸೈಯದ್ ನಸರುದ್ದೀನ್ ಸದಸ್ಯರು | 9741518897 |
| ೧೦ | ಶ್ರೀ.ಬಿ.ವಿಶ್ವಕುಮಾರ್ ಸದಸ್ಯರು | 9845371963 |
| ೧೧ | ಶ್ರೀ.ಮುನಿಂದ್ರ ಮೇಲ್ವಿಚಾರಕರು ಘ.ತ್ಯಾ.ನಿ | 9901002067 |
| ೧೨ | ಶ್ರೀ ರಮೇಶ್ ಸದಸ್ಯರು | 9731108622 |
| ೧೩ | ಶ್ರೀ.ಗಂಗಾದ್ರೀ ಮೇಲ್ವಿಚಾರಕರು ಘ.ತ್ಯಾ.ನಿ | 9980225272 |
| ೧೪ | ಶ್ರೀ.ಎನ್.ಲೋಕೇಶ್ ಸದಸ್ಯರು | 9448579144 |
| ೧೫ | ಶ್ರೀ.ಬಿ.ಟಿ.ಕೃಷ್ಣಮೂರ್ತಿ ಸದಸ್ಯರು | 9886339044 |
| ೧೬ | ಶ್ರೀಮತಿ.ಸ್ವಾಮಿಗೌಡ ಪರಿವೀಕ್ಷಕರು ತೊಟಗಾರಿಕೆ ಇಲಾಖೆ ದಕ್ಷಿಣ | 9945378526 |
| ೧೭ | ಶ್ರೀ ಮಂಜೂನಾಥ ಪಿ. ಮೇಲ್ವಿಚಾರಕರು ಘ.ತ್ಯಾ.ನಿ | 9740903427 |
| ೧೮ | ಶ್ರೀ.ದೇವರಾಜು ಮಡಿವಾಳ ಪೊಲೀಸ್ ಠಾಣೆ | 9972106146 |
| ೧೯ | ಶ್ರೀಮತಿ.ಕವಿತ ಆರ್. | 9620394514 |

1) ಮಾನ್ಯ ನೋಡಲ್ ಅಧಿಕಾರಿಗಳು ಸಭೆಯನ್ನು ಪ್ರಾರಂಭಿಸುತ್ತಾ, ಕೋವಿಡ್ ಲಸಿಕೆ ಬೂಷ್ಟರ್ ಡೋಸ್ ಪಡೆಯುವ ವಿಧಾನದ ಬಗ್ಗೆ ಕೇಳಲಾಗಿ, ಸಭೆಯಲ್ಲಿ ಹಾಜರಿದ್ಧ. ಶ್ರೀ ಮಹಮ್ಮದ್ ಕಮ್ರಾನ್ ಮೆಡಿಕಲ್ ಆಫೀಸರ್ ರವರು ಸಾಮನ್ಯವಾಗಿ ಕೋ–ವಾಕ್ಷಿನ್ ಅಥವ ಕೋವಿಶೀಲ್ಡ್ ಇವುಗಳಲ್ಲಿ ಯಾವುದಾದರೂ 2 ಬಾರಿ ಪಡೆದು 9 ತಿಂಗಳ ನಂತರ ಮಾತ್ರ ಕೋವಿಡ್ ಲಸಿಕೆ ಕೋವಿಶಿಲ್ಡ್ ಬೂಷ್ಟರ್ ಡೋಸ್‌ನ್ನು ಪಡೆಯಬಹುದಾಗಿರುತ್ತದೆ ಎಂದು ಸಭೆಗೆ ವಿವರಿಸಿದರು.

2) ಸಭಾಧ್ಯಕ್ಷರು ಮಾತನಾಡಿ, ಮಾರ್ಷಲ್ ರವರಿಗೆ ಮಹಾಮಾರಿ ಕೊರೋನ ರೋಗ ಮೂರನೇ ಅಲೆಯ ಹೊಸ ರುಪಾಂತರಿ ತಳಿ ಓಮಿಕ್ರಾನ್ ರೋಗ ಹರಡದಂತೆ ತಡೆಯಲು ಮುಂಜಾಗ್ರತ ಕ್ರಮವಾಗಿ ವಾರ್ಡ್ ವ್ಯಾಪ್ತಿಯಲ್ಲಿ ಯಾವುದೇ ಸಭೆ, ಸಮಾರಂಭಗಳು ನಡೆದರೆ ತಪಾಸಣೆ ಮಾಡಿ, ಪರವಾನಿಗೆ ಇಲ್ಲದಿದ್ದರೆ ಪರಿಶೀಲಿಸಿ ಅಂತಹ ಸಮಾರಂಭಗಳನ್ನು ಸ್ಥಗಿತಗೊಳಿಸತಕ್ಕದ್ದು, ಮತ್ತು ಕಡ್ಡಾಯವಾಗಿ ಮಾಸ್ಕ್ ದರಿಸುವುದು ಸಾಮಾಜಿಕ ಅಂತರ ಕಾಯ್ದುಕೊಳ್ಳಲು ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳಲು ಜಾಗೃತಿ ಮೂಡಿಸಬೆಕು ಹಾಗೂ ಮಾಸ್ಕ ದರಿಸದೇ ಇದ್ದವರಿಗೆ ದಂಡ ವಸೂಲಿ ಮಾಡಲು ಸಭೆಯಲ್ಲಿ ಹಾಜರಿದ್ದು ವಾರ್ಡ್ ಸದಸ್ಯರು ರವರಿಗೆ ಸೂಚಿಸಿದರು.

3) ಶ್ರೀ.ಲೋಕೇಶ್.ಎನ್ ರವರು ಮಾತನಾಡಿ, ಸೆಂಟ್ ಜಾನ್ಸ್ ಆರ್ಚ್ ರಸ್ತೆಯಲ್ಲಿ ಮದ್ಯಾಪಾನ ಮಾಡಿ ರಾತ್ರಿಹೊತ್ತಿನಲ್ಲಿ ವೀಲಿಂಗ್ ಮಾಡುತ್ತಿರುವುದು ಹೆಚ್ಚಾಗಿ ಕಂಡುಬಂದಿರುತ್ತದೆ. ಈ ಬಗ್ಗೆ ಮಡಿವಾಳ ಪೊಲೀಸ್ ಠಾಣೆಯವರಿಗೆ ಹಲವಾರು ಬಾರಿ ದೂರು ನೀಡಿದ್ದರೂ ಸಹ ಯಾವುದೇ ಕ್ರಮಗಳು ಜರುಗಿಸದಿರುವುದು ಕಂಡುಬಂದಿರುತ್ತದೆ ಈ ಪ್ರದೇಶಕ್ಕೆ ಗಸ್ತುಮಾಡುವುದು ಸೂಕ್ತವಿರುತ್ತದೆ ಹಾಗು ಸದರಿ ರಸ್ತೆಯಲ್ಲಿ ರೋಡ್ ಹಂಪ್ಸ್‌ನ್ನು ಅಳವಡಿಸಲು ಸಭೆಗೆ ತಿಳಿಸಿದರು. ಈ ಬಗ್ಗೆ ಮಾನ್ಯ ಸಭಾಧ್ಯಕ್ಷರು ಮಾತನಾಡಿ ಸಭೆಗೆ ಹಾಜರಿದ್ದ ಪೊಲೀಸ್ ಅಧಿಕಾರಿರವರಿಗೆ ಈ ಬಗ್ಗೆ ಕ್ರಮ ಕೈಗೊಳ್ಳಲು ಮತ್ತು ಹೊಯ್ಯಸಳ ಅಧಿಕಾರಿಗಳು ರಾತ್ರಿ ಸಮಯದಲ್ಲಿ ಗಸ್ತುಮಾಡುವುದಕ್ಕೆ ಸೂಚಿಸಿದರು ಹಾಗೂ ಸದರಿ ಪ್ರದೇಶದಲ್ಲಿ ವೈಜ್ಞಾನಿಕವಾಗಿ ರೋಡ್ ಹಂಪ್ಸ್‌ನ್ನು ಅಳವಡಿಸಲು ಟ್ರಾಫಿಕ್ ಇಂಜಿನಿಯರಿಂಗ್ ಸೆಲ್ ಬಿ.ಬಿ.ಎಂ.ಪಿ ಕೇಂದ್ರ ಕಛೇರಿಗೆ ಪತ್ರ ಬರೆಯಲು ವಾರ್ಡ್ ಅಭಿಯಂತರರಿಗೆ ತಿಳಿಸಿದರು.

4) ಶ್ರೀ.ಲೋಕೇಶ್ ರವರು ಮಾತನಾಡಿ ಬೃಂದಾವನ ನಗರ 2ನೇ ಮುಖ್ಯರಸ್ತೆಗೆ ಈಗಾಗಲೇ ಹೊಸದಾಗಿ ಡಾಂಬರೀಕರಣ ರಸ್ತೆ ನಿರ್ಮಿಸಿರುತ್ತಾರೆ. ಆದರೆ ಸದರಿ ರಸ್ತೆಯಲ್ಲಿನ ಮ್ಯಾನ್‌ಹೊಲ್‌ಗಳು ರಸ್ತೆ ಮಟ್ಟಕ್ಕಿಂತ ಕೆಳಭಾಗಕ್ಕೆ ಇರುವುದರಿಂದ ರಸ್ತೆ ಸವಾರರಿಗೆ ಸಂಚಾರಕ್ಕೆ ತೊಂದರೆಯಾಗುತ್ತಿರುತ್ತದೆ. ಆದುದರಿಂದ ಕೂಡಲೇ ಮ್ಯಾನ್‌ಹೋಲ್‌ಗಳನ್ನು ರಸ್ತೆ ಮಟ್ಟಕ್ಕೆ ಹೆಚ್ಚಿಸಲು ಸಭೆಗೆ ತಿಳಿಸಿದರು. ಈ ಬಗ್ಗೆ ಮಾನ್ಯ ಸಭಾಧ್ಯಕ್ಷರು, ಬೆಂಗಳೂರು ನೀರು ಸರಬರಾಜು ಮಂಡಳಿಯವರ ಅಧಿಕಾರಿಗಳನ್ನು ಉದ್ದೇಶಿಸಿ ಮಾತನಾಡಿ ಪ್ರಸ್ತಾಪಿತ ದೂರಿನ ಬಗ್ಗೆ ಕ್ರಮವಹಿಸಲು ಸೂಚಿಸಿದರು.

5) ಸಭೆಗೆ ಹಾಜರಿದ್ದ ಶ್ರೀ ಸೈಯದ್ ನಜೂರುದ್ದಿನ್ ಮಾತನಾಡಿ, 6ನೇ ಅಡ್ಡರಸ್ತೆ ಬಾಲಜಿನಗರ ಪ್ರದೇಶದಲ್ಲಿ ಬೃಹತ್ ಮಳೆ ನೀರುಗಾಲುವೆ ಇದ್ದು, ಅಲ್ಲಿನ ಅಕ್ಕ ಪಕ್ಕದ ನಿವಾಸಿಗಳು ಡೆಬ್ರಿಸ್ ಮತ್ತು ಇತರೆ ಅನುಪಯುಕ್ತ ಕಸವನ್ನು ಗಾಲಿವೆಯಲ್ಲಿ ಬಿಸಾಡುತ್ತಿರುವುದರಿಂದ ಅಲ್ಲಿನ ವಾತವರಣ ಅನೈರ್ಮಲ್ಯವಾಗುತ್ತಿರುತ್ತದೆ. ಆದುದರಿಂದ ಸದರಿ ಮಳೆ ನೀರುಗಾಲುವೆಗೆ ಕಸ ಬಿಸಾಡದಂತೆ ಫೆನ್ಸಿಂಗ್‌ನ್ನು ಅಳವಡಿಸಲು ಅನೇಕಬಾರಿ ತಿಳಿಸಿದ್ದರೂ ಸಹ ಇಲ್ಲಿಯವರೆಗು ಯಾವುದೇ ಕ್ರಮಜರುಗಿಸಿರುವುದಿಲ್ಲ ಎಂದು ತಿಳಿಸಿದರು. ಈ ಬಗ್ಗೆ ಮಾನ್ಯ ಅಧ್ಯಕ್ಷರು ತಕ್ಷಣವೆ ಬೃಹತ್ ಮಳೆ ನೀರುಗಾಲುವೆ ಇಲಾಖೆಯ ಮುಖ್ಯ ಅಭಿಯಂತರವರನ್ನು ದೂರವಾಣಿ ಮುಖೇನ ಮಾತನಾಡಿ ಪ್ರಸ್ತಾಪಿತ ದೂರಿನ ಬಗ್ಗೆ ಬಗೆಹರಿಸಲು ಸೂಚಿಸಿದರು.

6) ಸಭೆಗೆ ಹಾಜರಿದ್ದ ಶ್ರೀ ಬಿ.ಟಿ ಕೃಷ್ಣಮೂರ್ತಿರವರು ಮಾತನಾಡಿ, 1ನೇ ಮುಖ್ಯರಸ್ತೆ, 8ನೇ ಅಡ್ಡರಸ್ತೆ ಬಾಲಜಿನಗರ ಶ್ರೀ ರಾಮ ದೇವಸ್ಥಾನದ ಪ್ರದೇಶದಲ್ಲಿ ಮೇಲ್ಭಾಗದ ವಿದ್ಯುತ್ ಕೇಬಲ್‌ಗಳು ಸಡಿಲವಾಗಿ ಕೆಳಭಾಗದಲ್ಲಿ ನೆತಾಡುತ್ತಿರುವುದು ಕಂಡುಬಂದಿರುತ್ತದೆ. ಸದರಿ ರಸ್ತೆಯಲ್ಲಿನ ಬೃಹತ್ ಗಾತ್ರದ ವಾಹನಗಳು ಸಂಚಾರಿಸುವ ವೇಳೆ ವಿದ್ಯುತ್ ಅವಘಡವಾಗುವ ಸಂಬವವಿರುತ್ತದೆ. ಆದುದರಿಂದ ನೇತಾಡುತ್ತಿರುವ ಕೇಬಲ್‌ಗಳನ್ನು ಸರಿಪಡಿಸಲು ಸಭೆಗೆ ತಿಳಿಸಿದರು. ಈ ಬಗ್ಗೆ ಸಭೆಗೆ ಹಾಜರಿದ್ದ ಬೆಸ್ಕಾಂ ಅಧಿಕಾರಿಗಳಿಗೆ ಕೂಡಲೇ ಕ್ರಮವಹಿಸಲು ತಿಳಿಸಿದರು.

7) ಸಭೆಗೆ ಹಾಜರಿದ್ದ ಶ್ರೀ ಮುನಿವೆಂಕಟಪ್ಪ ಆರಕ್ಷಕ ಉಪನಿರೀಕ್ಷರು ಸಂಚಾರಿ ಪೊಲೀಸ್ ಠಾಣೆ ಮೈಕೋ ಲೇಔಟ್ ರವರು ಮಾತನಾಡಿ, ಎಸ್.ಜಿ.ಪಾಳ್ಯ ವ್ಯಾಪ್ತಿಪ್ರದೇಶಗಳಲ್ಲಿ ಸಾರ್ವಜನಿಕರು ಹೆಲ್‌ಮೆಟ್ ಧರಿಸದೇ ದ್ವೀಚಕ್ರವಾಹನಗಳನ್ನು ಚಲಾಯಿಸುತ್ತಿರುವುದು ಹೆಚ್ಚಾಗಿ ಕಂಡುಬರುತ್ತಿರುತ್ತದೆ. ಈ ಬಗ್ಗೆ ಹಲವಾರು ಬಾರಿ ತಿಳಿಸಿದ್ದರೂ ಸಹ ನಾವೆಲ್ಲ ಸ್ಥಳೀಯರು ವಾದಿಸುತ್ತಿರುವುದು ಕಂಡುಬಂದಿರುತ್ತದೆ ಹಾಗೂ ಹೆಲ್‌ಮೆಟ್‌ರಹಿತ ದ್ವಿಚಕ್ರ ವಾಹನ ಚಲಿಸುವಾಗ ರಸ್ತೆ ಅಪಘಾತಗಳಾದಲ್ಲಿ ಪ್ರಾಣಹಾನಿಯಾವು ಸಂಭವವಿದ್ದು, ಅವಲಂಬಿತ ಕುಟುಂಬ ಸದಸ್ಯರಿಗೂ ತುಂಬ ತೊಂದರೆಯಾಗುತ್ತದೆ. ಆದುದರಿಂದ ಸಭೆಗೆ ಹಾಜರಿದ್ದ ಎಲ್ಲಾ ವಾರ್ಡ್ ಸದಸ್ಯರಿಗೆ ತಿಳಿಸುತ್ತಾ, ವಾರ್ಡ್ ಪ್ರದೇಶದ ಸ್ಥಳಿಯರಿಗೆ ಅದರಲ್ಲೂ ಯುವ ಜನತೆಗೆ ಹೆಲ್‌ಮೆಟ್ ದರಿಸಿ ಸುರಕ್ಷಿತ ವಾಹನ ಚಲಾಯಿಸಲು ಜಾಗೃತಿ ಮೂಡಿಸಿಸಬೇಕೆಂದು ಸಭೆಗೆ ತಿಳಿಸಿದರು.

8) ಸಭೆಗೆ ಹಾಜರಿದ್ದ ಶ್ರೀಮತಿ.ಕವಿತ ಆರ್ ರವರು ಮಾತನಾಡಿ, ಎಸ್.ಜಿ.ಪಾಳ್ಯ ವಾರ್ಡ್‌ವ್ಯಾಪ್ತಿಯಲ್ಲಿ ಕಳೆದ ಕೊವಿಡ್ 1ನೇ, 2ನೇ ಮತ್ತು 3ನೇ ಅಲೆಯಲ್ಲಿ ಕೊರೋನಾ ರೋಗಕ್ಕೆ ತುತ್ತಾಗಿ, ಸಾಕಾಷ್ಟು ಜನರು ಮೃತಪಟ್ಟಿದ್ದು, ಇದರ ಪೈಕಿ ಕೆಲವು ಜನರಿಗಷ್ಟೆ ಪರಿಹಾರ ಬಂದಿದ್ದು, ಉಳಿದವರಿಗೆ ದಾಕಲಾತಿಗಳನ್ನು ಸಲ್ಲಿಸಿದ್ದರೂ ಸಹ ಪರಿಹಾರ ಬಂದಿರುವುದಿಲ್ಲ ಎಂದು ಸಭೆಗೆ ತಿಳಿಸಿದರು. ಈ ಬಗ್ಗೆ ಮಾನ್ಯ ಸಭಾಧ್ಯಕ್ಷರು ಮಾತನಾಡಿ, ಸಭೆಗೆ ಹಾಜರಿದ್ದ ಶ್ರೀ ಮಲ್ಲಿಕಾರ್ಜುನ್ ಹಿರಿಯ ಆರೋಗ್ಯ ಪರಿವೀಕ್ಷಕರನ್ನು ಉದ್ದೇಶಿಸಿ, ಸಂಬಂಧ ಪಟ್ಟ ಅಧಿಕಾರಿಗಳಿಂದ ಸೂಕ್ತ ಕ್ರಮವಹಿಸಲು ತಿಳಿಸಿದರು.

9) ಮಾನ್ಯ ಅಧ್ಯಕ್ಷರು ಮಾತನಾಡಿ, ವಾರ್ಡ್ ವ್ಯಾಪ್ತಿಯ ಘನತ್ಯಾಜ್ಯ ನಿರ್ವಹಣೆ ಬಗ್ಗೆ ಪ್ರಸ್ತಾಪಿಸಲಾಗಿ, ಶ್ರೀ ಅಜಯ್ ಕಿರಿಯ ಆರೋಗ್ಯ ಪರಿವೀಕ್ಷರು ಮಾತನಾಡಿ ವಾರ್ಡ್ ಪ್ರದೇಶದಲ್ಲಿ ಒಣತ್ಯಾಜ್ಯ ಮತ್ತು ಹಸಿ ತ್ಯಾಜ್ಯ ಸಮರ್ಪಕವಾಗಿ ಸಂಗ್ರಹಿಸಿ ವಿಲೇವಾರಿ ಮಾಡಲಾಗುತ್ತಿರುತ್ತದೆ ಮತ್ತು ಬ್ಲಾಕ್ ಸ್ಪಾಟ್‌ಗಳ ಸಂಖ್ಯೆಗಳು ಆದಷ್ಟು ಕಡಿತಗೊಳಿಸಲು ಶ್ರಮವಹಿಸಲಾಗುತಿರುತ್ತದೆ ಎಂದು ಸಭೆಗೆ ತಿಳಿಸಿದರು.

ಕೊನೆಯದಾಗಿ ಸಭೆ ಅಧ್ಯಕ್ಷರು ಮಾತನಾಡಿ, ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರು, ತಮ್ಮ ಪ್ರದೇಶದ ರಸ್ತೆಗಳಲ್ಲಿ ಬೀದಿ ದೀಪ ಹಾಗೂ ರೋಡ್‌ಹಂಪ್ಸ್‌ಗಳು ಅವಶ್ಯಕತೆ ಇದ್ದಲ್ಲಿ ಪಟ್ಟಿಯನ್ನು ತಯಾರಿಸಿ ಸಲ್ಲಿಸಲು ತಿಳಿಸುತ್ತಾ, ಈ ಮೇಲ್ಕಂಡ ಎಲ್ಲಾ ವಿಷಯಗಳನ್ನು ಹಾಗೂ ಸಮಸ್ಯೆಗಳನ್ನು ಬರುವ ಮುಂದಿನ ಸಭೆಯೊಳಗಾಗಿ ನಿವಾರಣೆ ಮಾಡಿ ಅನುಪಾಲನೆ ವರದಿಯನ್ನು ಸಂಬಂಧಪಟ್ಟ ಅಧಿಕಾರಿಗಳು ಕಳುಹಿಸಿಕೊಡಬೇಕಾಗಿ ಈ ಮೂಲಕ ಸೂಚಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

S. Prabhakar

| | |
|---|---|
| (ಶ್ರೀ. ಸತೀಶ್.ಡಿ) | (ಶ್ರೀ. ಎಸ್.ಪ್ರಭಾಕರ್) |
| ಕಾರ್ಯದರ್ಶಿಗಳು | ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು |
| ವಾರ್ಡ್–152 ಎಸ್.ಜಿ.ಪಾಳ್ಯ | ವಾರ್ಡ್–152 ಎಸ್.ಜಿ.ಪಾಳ್ಯ |

ಪ್ರತಿಯನ್ನು:

1. ಮಾನ್ಯ ಮುಖ್ಯ ಆಯುಕ್ತರು ರವರ ಅವಗಾಹನೆಗೆ ಸಲ್ಲಿಸಲು ಆಪ್ತ ಕಾರ್ಯಾಲಯಕ್ಕೆ ಸಲ್ಲಿಸಿದೆ.
2. ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಅವಗಾಹನೆಗೆ ಸಲ್ಲಿಸಿದೆ.
3. ಮಾನ್ಯ ವಿಶೇಷ ಆಯುಕ್ತರು (ಘನತ್ಯಾಜ್ಯ) ರವರ ಅವಗಾಹನೆಗೆ ಸಲ್ಲಿಸಿದೆ.
4. ಜಂಟಿ ಆಯುಕ್ತರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
5. ಮುಖ್ಯ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
6. ಅಧೀಕ್ಷಕ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
7. ಕಾರ್ಯಪಾಲಕ ಅಭಿಯಂತರರು, ಬಿ.ಟಿ.ಎಂ.ಲೇಔಟ್ ವಿಭಾಗರವರಿಗೆ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೋರಮಂಗಲ ಉಪ–ವಿಭಾಗ ರವರಿಗೆ ಮುಂದಿನ ಕ್ರಮಕ್ಕೆ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರಿಗೆ ಮುಂದಿನ ಕ್ರಮಕ್ಕೆ.
10. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ಜಲಮಂಡಳಿ, ಬಿ.ಟಿ.ಎಂ ರವರಿಗೆ ಮುಂದಿನ ಕ್ರಮಕ್ಕೆ
11. ಸಹಾಯಕ ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ(ದ) ರವರಿಗೆ ಮುಂದಿನ ಕ್ರಮಕ್ಕೆ.